ಕರ್ನಾಟಕ ವಿಧಾನ ಪರಿಷತ್ತು

# ಕರ್ನಾಟಕ ವಿಧಾನ ಮಂಡಲದ ಮಾಜಿ ಸದಸ್ಯರುಗಳಿಗೆ ಇರುವ ಸೌಲಭ್ಯಗಳು

(ದಿನಾಂಕ :01.04.2022ರಲ್ಲಿದ್ದಂತೆ)



**ಲೆಕ್ಕಪತ್ರಗಳ ಶಾಖೆ-1**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

# ಕರ್ನಾಟಕ ವಿಧಾನ ಮಂಡಲದ ಮಾಜಿ ಸದಸ್ಯರುಗಳಿಗೆ ಇರುವ ಸೌಲಭ್ಯಗಳು

(ದಿನಾಂಕ 01.04.2022ರಲ್ಲಿದ್ದಂತೆ)

ಲೆಕ್ಕಪತ್ರಗಳ ಶಾಖೆ – 1

ಕರ್ನಾಟಕ ವಿಧಾನ ಪರಿಷತ್ತಿನ

ಸಚಿವಾಲಯ,

ವಿಧಾನಸೌಧ, ಬೆಂಗಳೂರು–560233

**ನಿವೃತ್ತಿ ವೇತನ:**

ವಿಧಾನ ಪರಿಷತ್ತಿನ ಅಥವಾ ವಿಧಾನ ಸಭೆಯ ಸದಸ್ಯರಾಗಿ ಅಥವಾ ಭಾಗಶ: ವಿಧಾನ ಸಭೆಯ ಸದಸ್ಯರಾಗಿ ಮತ್ತು ಭಾಗಶ: ವಿಧಾನ ಪರಿಷತ್ತಿನ ಸದಸ್ಯರಾಗಿ ಐದು ವರ್ಷಗಳ ಅವಧಿಗೆ ಸೇವೆಯನ್ನು ಸಲ್ಲಿಸಿದಂಥ ಒಬ್ಬ ವ್ಯಕ್ತಿಯು ಅವನ ಉಳಿದ ಜೀವಿತಾವಧಿಯವರೆಗೆ ಪ್ರತಿ ತಿಂಗಳು ಐವತ್ತು ಸಾವಿರ ರೂಪಾಯಿಗಳ ದರದಲ್ಲಿ ನಿವೃತ್ತಿ ವೇತನವನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ಯಾರೇ ವ್ಯಕ್ತಿಯು ಐದು ವರ್ಷಗಳಿಗಿಂತ ಹೆಚ್ಚು ಕಾಲ ಸೇವೆಯನ್ನು ಸಲ್ಲಿಸಿದ್ದಲ್ಲಿ, ಆತನಿಗೆ ತದನಂತರ ಪೂರ್ಣಗೊಂಡ ಪ್ರತಿಯೊಂದು ಅವಧಿಗೆ ಮಾಸಿಕ ಐದು ಸಾವಿರ ರೂಪಾಯಿಗಳ

ದರದಲ್ಲಿ ಹೆಚ್ಚುವರಿ ನಿವೃತ್ತಿ ವೇತನವನ್ನು ಸಂದಾಯಮಾಡತಕ್ಕದ್ದು, ಅದು ಒಂದು ಲಕ್ಷ ರೂಪಾಯಿಗಳನ್ನು ಮೀರತಕ್ಕದ್ದಲ್ಲ.

ಮೊದಲ ಬಾರಿಗೆ ಆಯ್ಕೆಗೊಂಡ ಒಬ್ಬ ವ್ಯಕ್ತಿಯು ವಿಧಾನ ಪರಿಷತ್ತಿನ ವಿಸರ್ಜನೆಯ ಕಾರಣದಿಂದಾಗಿ ಐದು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸುವುದಕ್ಕೆ ತಡೆಯುಂಟಾದಲ್ಲಿ ಆ ವ್ಯಕ್ತಿಯೂ ಸಹ ನಿವೃತ್ತಿ ವೇತನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

ಒಬ್ಬ ವ್ಯಕ್ತಿಯು ಉಪ ಚುನಾವಣೆಯಲ್ಲಿ ಚುನಾಯಿತನಾಗಿದ್ದರೆ ಅಥವಾ ಅವಧಿಯ ಮಧ್ಯದಲ್ಲಿ ಸದಸ್ಯನಾಗಿ ನಾಮನಿರ್ದೇಶನ ಗೊಂಡಿದ್ದರೆ ಮತ್ತು ಪೂರ್ಣಾವಧಿಯವರೆಗೆ ಸೇವೆ ಸಲ್ಲಿಸಲು ಅಸಮರ್ಥನಾಗಿದ್ದಲ್ಲಿ, ಆ ವ್ಯಕ್ತಿಯೂ ಸಹ ನಿವೃತ್ತಿ ವೇತನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

ಮೊದಲ ಬಾರಿಗೆ ಚುನಾಯಿತನಾಗಿರುವ ವ್ಯಕ್ತಿಯು ರಾಜೀನಾಮೆ ನೀಡಿದ್ದಲ್ಲಿ, ಆ ವ್ಯಕ್ತಿಯೂ ಸಹ ನಿವೃತ್ತಿ ವೇತನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

**ವಿಮಾನ ಮತ್ತು ರೈಲ್ವೆ ಪ್ರಯಾಣ ಭತ್ಯೆ:**

ಪ್ರತಿ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಒಬ್ಬ ಪಿಂಚಣಿದಾರನು ಭಾರತದಲ್ಲಿ ವಿಮಾನದ ಮೂಲಕವಾಗಲೀ ಅಥವಾ ರೈಲ್ವೆ ಮೂಲಕವಾಗಲೀ ಒಂದು ಅಥವಾ ಒಂದಕ್ಕಿಂತ ಹೆಚ್ಚು ಪ್ರಯಾಣಗಳಲ್ಲಿ ಒಬ್ಬರೇಯಾಗಲೀ ಅಥವಾ ಒಬ್ಬ ಸಹವರ್ತಿಯೊಂದಿಗಾಗಲೀ ಪ್ರಯಾಣಿಸುವ ವೆಚ್ಚಗಳನ್ನು ಭರಿಸುವ ಉದ್ದೇಶಕ್ಕಾಗಿ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಎರಡು ಸಮಾನ ಕಂತುಗಳಲ್ಲಿ ವರ್ಷಕ್ಕೆ ಎರಡು ಬಾರಿ ಒಟ್ಟು

ಒಂದು ಲಕ್ಷ ರೂಪಾಯಿಗಳನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**ಬಸ್ ಪ್ರಯಾಣ ಪಾಸ್:**

ಒಬ್ಬ ಪಿಂಚಣಿದಾರನಿಗೆ ಮತ್ತು ಅವನ ಸಹವರ್ತಿಗೆ ವರ್ಗಾಯಿಸಲಾಗದ ಒಂದು ಬಸ್ ಪಾಸ್ ಅನ್ನು ಒದಗಿಸತಕ್ಕದ್ದು, ಅದು ಅವರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ರಸ್ತೆ ಸಾರಿಗೆ ಸೇವೆಗಳ ಮೂಲಕ ಕರ್ನಾಟಕದಲ್ಲಿರುವ ಅಂತಹ ಸದಸ್ಯರ ಸಾಮಾನ್ಯ ವಾಸಸ್ಥಳದಿಂದ ಕರ್ನಾಟಕ ರಾಜ್ಯದ ಅಥವಾ ರಾಜ್ಯದ ಹೊರಗಿರುವ ಯಾವುದೇ ಸ್ಥಳಕ್ಕೆ ಯಾವುದೇ ಸಮಯದಲ್ಲಿ ಪ್ರಯಾಣಿಸಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅದರಲ್ಲಿ ನಿಯಮಿಸಬಹುದಾದಂತಹ ದರ್ಜೆಯ ವಸತಿಯೂ ಸಹ ಒಳಗೊಂಡಿರತಕ್ಕದ್ದು.

ವೈದ್ಯಕೀಯ ಸೌಲಭ್ಯಗಳು:

ನಿವೃತ್ತಿ ವೇತನವನ್ನು ಸ್ವೀಕರಿಸುವ ಪ್ರತಿಯೊಬ್ಬ ಮಾಜಿ ಸದಸ್ಯನು ಪ್ರತಿ ತಿಂಗಳು ಐದು ಸಾವಿರ ರೂಪಾಯಿಗಳ ನಿಗದಿತ ವೈದ್ಯಕೀಯ ಭತ್ಯೆಗೆ ಹಕ್ಕುಳ್ಳತಕ್ಕವನಾಗಿದ್ದು, ಸದರಿ ತಿಂಗಳಿನಲ್ಲಿ ವೈದ್ಯಕೀಯ ಮರುಪಾವತಿಯ ಕ್ಲೇಮು ಯಾವುದಾದರೂ ಇದ್ದಲ್ಲಿ, ಸದರಿ ಮೊಬಲಗನ್ನು ಕಡಿತಗೊಳಿಸಿಕೊಳ್ಳತಕ್ಕದ್ದೆಂಬ ಷರತ್ತಿಗೆ ಒಳಪಟ್ಟಿರತಕ್ಕದ್ದು.

ರಾಜ್ಯ ಸರ್ಕಾರವು ನಿರ್ವಹಿಸುವ ಯಾವುದೇ ಆಸ್ಪತ್ರೆ ಅಥವಾ ಔಷಧಾಲಯದಲ್ಲಿ ಮತ್ತು ಕರ್ನಾಟಕ ವಿಧಾನಮಂಡಲದಿಂದ ಅಧಿಸೂಚಿಸಲ್ಪಟ್ಟ ಯಾವುದೇ ಆಸ್ಪತ್ರೆ ಅಥವಾ ಔಷಧಾಲಯದಲ್ಲಿ ತಾನು ಮತ್ತು ತನ್ನ ಕುಟುಂಬದ ಸದಸ್ಯರು ಪಡೆದ ವೈದ್ಯೋಪಚಾರ ಹಾಗೂ

ಚಿಕಿತ್ಸೆಗಾಗಿ ವೆಚ್ಚಗಳನ್ನು ಭರಿಸಿರುವ ಯಾರೇ ಪಿಂಚಣಿದಾರನು ಅದರ ಮೇಲೆ ಮಾಡಿದ ವೆಚ್ಚಗಳ ಮರುಪಾವತಿಗೆ ಹಕ್ಕುಳ್ಳವನಾಗಿರತಕ್ಕದ್ದು. ವೆಚ್ಚಗಳಲ್ಲಿ ಅಂಥ ಚಿಕಿತ್ಸೆಯನ್ನು ಪಡೆದುಕೊಂಡ ಸ್ಥಳದಲ್ಲಿ ವಸತಿಗಾಗಿ ಮಾಡಿದ ವೆಚ್ಚಗಳನ್ನು ಒಳಗೊಂಡಿರತಕ್ಕದ್ದು.

ರಾಜ್ಯ ಸರ್ಕಾರದಿಂದ ನಿರ್ವಹಿಸಲ್ಪಟ್ಟ ಆಸ್ಪತ್ರೆ ಅಥವಾ ಔಷಧಾಲಯವನ್ನು ಹೊರತುಪಡಿಸಿ ಮತ್ತು ಕರ್ನಾಟಕ ವಿಧಾನ ಮಂಡಲದಿಂದ ಅಧಿಸೂಚಿಸಲ್ಪಟ್ಟ ಆಸ್ಪತ್ರೆ ಅಥವಾ ಔಷಧಾಲಯವನ್ನು ಹೊರತುಪಡಿಸಿ, ಪಿಂಚಣಿದಾರನು ಬೇರೆ ಯಾವುದೇ ಸ್ಥಳದಲ್ಲಿ ತಾನು ಪಡೆದ ವೈದ್ಯೋಪಚಾರ ಮತ್ತು ಚಿಕಿತ್ಸೆಗಾಗಿ ತಾನು ಮಾಡಿದ ವೆಚ್ಚಗಳಿಗೆ ಸಂಬಂಧಿಸಿದಂತೆ, ಸರ್ಕಾರಿ ಆಸ್ಪತ್ರೆ ಅಥವಾ ಔಷಧಾಲಯದಲ್ಲಿ ಎಷ್ಟು

ಪ್ರಮಾಣದ ವೈದ್ಯಕೀಯ ವೆಚ್ಚಗಳನ್ನು ಭರಿಸಿ ವೈದ್ಯಕೀಯ ವೆಚ್ಚಗಳ ಮರುಪಾವತಿ ಪಡೆಯುತ್ತಿದ್ದನೋ ಅಷ್ಟೇ ಪ್ರಮಾಣದ ವೈದ್ಯಕೀಯ ವೆಚ್ಚಗಳ ಮರುಪಾವತಿಗೆ ಹಕ್ಕುಳ್ಳವನಾಗಿರತಕ್ಕದ್ದು.

1. 'ಕುಟುಂಬದ ಸದಸ್ಯ' ಎಂದರೆ ಪತಿ ಅಥವಾ ಪತ್ನಿ, 25 ವರ್ಷ ವಯೋಮಾನದವರೆಗಿನ ಅವಲಂಬಿತ ಅವಿವಾಹಿತ ಮಗ, ಅವಲಂಬಿತ ಅವಿವಾಹಿತ ಮಗಳು, ಅಂಗವಿಕಲ ಮಕ್ಕಳೂ ಸೇರಿದಂತೆ ಮಾನಸಿಕ ಅಸ್ವಸ್ಥ ಮಕ್ಕಳು, ತಂದೆ ಹಾಗೂ ತಾಯಿ ಮತ್ತು ವಿಧಾನಮಂಡಲದ ಮಹಿಳಾ ಮಾಜಿ ಸದಸ್ಯರ ಸಂದರ್ಭದಲ್ಲಿ ಅವರ ಅತ್ತೆ/ಮಾವ

2. ಯಾರೇ ಪಿಂಚಣಿದಾರನು ತನ್ನ ಜೀವಿತಾವಧಿಯಲ್ಲಿ ಒಮ್ಮೆ ಶ್ರವಣ ಸಾಧನಕ್ಕಾಗಿ ಪ್ರತಿ ಕಿವಿಗೆ ರೂ.1,00,000/-ವರೆಗೆ, ದಂತಪಂಕ್ತಿಗಾಗಿ ರೂ.50,000/-ವರೆಗೆ ಹಾಗೂ ಕ್ಯಾಪ್‌ನೊಂದಿಗೆ ರೂಟ್‌ಕೆನಾಲ್‌ಗಾಗಿ ರೂ.10,000/ವರೆಗೆ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಹಕ್ಕುಳ್ಳವರಾಗಿರತಕ್ಕದ್ದು.

**ಕುಟುಂಬ ನಿವೃತ್ತಿ ವೇತನ:**

(1) ಯಾರೇ ಸದಸ್ಯನು ತಮ್ಮ ಪದಾವಧಿಯು ಮುಕ್ತಾಯವಾಗುವುದಕ್ಕಿಂತ ಮುಂಚೆ ಮರಣ ಹೊಂದಿದ್ದಲ್ಲಿ ಅಥವಾ ನಿವೃತ್ತಿ ವೇತನಕ್ಕೆ ಅರ್ಹನಾದ ವ್ಯಕ್ತಿಯು ಮರಣ ಹೊಂದಿದ್ದಲ್ಲಿ ಅಂಗೀಕಾರಾರ್ಹವಾದ

ನಿವೃತ್ತಿ ವೇತನದ ಶೇಕಡ ಐವತ್ತರಷ್ಟು ದರದಲ್ಲಿ ಕುಟುಂಬ ನಿವೃತ್ತಿ ವೇತನವನ್ನು ಆತನ ಕುಟುಂಬಕ್ಕೆ ಸಂದಾಯ ಮಾಡತಕ್ಕದ್ದು.

(2) ವಿಧಾನ ಪರಿಷತ್ತಿನ ಅಥವಾ ವಿಧಾನಸಭೆಯ ಸದಸ್ಯನು ಆತನು ನಿವೃತ್ತಿ ವೇತನವನ್ನು ಸ್ವೀಕರಿಸುತ್ತಿರಲಿ ಅಥವಾ ಇಲ್ಲದಿರಲಿ ಆ ಮೃತ ವ್ಯಕ್ತಿಯ ಕುಟುಂಬವು ಕುಟುಂಬ ನಿವೃತ್ತಿ ವೇತನಕ್ಕೆ ಹಕ್ಕುಳ್ಳದ್ದಾಗಿರತಕ್ಕದ್ದು.

**ವೈದ್ಯಕೀಯ ಭತ್ಯೆ:**

ಯಾರೇ ಕುಟುಂಬ ಪಿಂಚಣಿದಾರನು ನಿಗದಿತ ವೈದ್ಯಕೀಯ ಭತ್ಯೆಯಾಗಿ ಪ್ರತಿ ತಿಂಗಳು ಎರಡು ಸಾವಿರದ ಐದು ನೂರು ರೂಪಾಯಿಗಳನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

* * * * * *

KARNATAKA LEGISLATIVE COUNCIL

# FACILITIES TO THE EX-MEMBERS OF KARNATAKA LEGISLATURE

(As on 01.04.2022)



ACCOUNTS-1 BRANCH

Karnataka Legislative Council Secretariat

# FACILITIES TO EX-MEMBERS OF KARNATAKA LEGISLATURE

## (AS ON 01.04.2022)

## ACCOUNTS-1 BRANCH

**Karnataka Legislative Council Secretariat**

**Vidhana Soudha, Bengaluru-560 233.**

**PENSION:**

A Person who has served for a period of Five years as a Member of Legislative Council or Legislative Assembly or partly as a Member of the Legislative Assembly and partly as a member of the Legislative Council would be paid **PENSION** at the rate of **Rupees Fifty Thousand** per mensem for the remainder of his life.

Any person who has served for more than five years there shall also be paid an **ADDITIONAL PENSION** at the

A person who was elected for the first time resigns, shall also be entitled for pension.

## RAILWAY /AIR TRAVELLING ALLOWANCE;

A pensioner for every financial year shall be entitled to a sum of rupees one lakh per annum payable twice a year in two equal installments in the month of April and October for the purpose of meeting travelling expenses either single or with companion in one or more journeys by air or railway in India.

## BUS TRAVELLING PASS:

A pensioner shall be provided with one non transferable pass for him and his companion which shall entitle them at any time to travel by road transport services of the Karnataka State Road Transport Corporation from the ordinary place of residence of such Member in Karnataka to any place in the State of Karnataka or outside the State to and fro in such class of accommodation therein, as may be prescribed.

## MEDICAL FACILITIES:

Every Ex-Member who is in receipt of the pension shall be entitled to Fixed Medical Allowance of **Rupees Five Thousand** per month, subject to the condition that the said amount shall be deducted in the medical reimbursement claim if any during the said month.

A pensioner who incurs expenses for the medical attendance and treatment obtained by him and members of his family at any Hospital or Dispensary maintained by the

State Government or in any notified Hospital or Dispensary, he shall be entitled for reimbursement of the expenses incurred therein. The expenses shall be inclusive of the charges for accommodation at the place where such treatment is taken.

In respect of expenses incurred by a pensioner for the Medical Attendance and treatment obtained by him in any place other than in a Hospital or Dispensary maintained by the State Government and other than in a Hospital or Dispensary notified by the Karnataka

Legislature, he shall be entitled to reimbursement of the expenses incurred to the same extent as in Government Hospital or Dispensary.

1. 'Member of family' means the husband or wife, dependant unmarried son upto 25 years of age, dependant unmarried daughter, mentally retarded children including handicapped children, father and mother and 'mother-in-law/father-in-law in case of female Ex-Member of Legislature.
2. A pensioner shall be entitled for reimbursement upto Rs.1,00,000/- per ear once in

his life time for hearing-aid, upto Rs.50,000/ for denture and upto Rs.10,000/- for root canal with cap.

## FAMILY PENSION:

(1) Where a Member dies before the expiry of his term or where a person eligible for pension dies, his / her family would be entitled to family pension at the rate of fifty percent of pension admissible

(2) The family of the deceased person, who was a member of the Legislative Council or the Legislative Assembly,

whether he was in receipt of pension or not, shall be entitled for family pension at the rate of fifty percent of pension admissible to that Member.

## MEDICAL ALLOWANCE:

A family pensioner shall be entitled for rupees two thousand five hundred per month as fixed medical allowance.

* * * * *

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂ. ಕಾ.ಸ.082 300ಪ್ರತಿಗಳು (ಎ-7)